ಮಾತನಾಡುವ ಪ್ರಶ್ನೆಯೇ ಇರುವುದಿಲ್ಲ. ಹಿಂದೆ ಒಬ್ಬ ಕಮೀಷನರ್ ಇದ್ದರು, ಅವರು ಕೋಲಾರದಲ್ಲಿ ಅವ್ಯವಹಾರ ಮಾಡಿ, ಗಲಾಟೆಯೂ ಆಗಿ, ಲೋಕಾಯುಕ್ತದವರು ನೋಟೀಸ್ ಕೊಟ್ಟು, ಅದನ್ನು ಎಲ್ಲಾ ಕಂಡು ಹಿಡಿದಿದ್ದಾರೆ. ಆದರೂ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿಲ್ಲ. ಅವರಿಗೆ ನಾವು ಏನು ಹೇಳಿದರೂ ಮಾಡುವುದಿಲ್ಲ, ನಾವು ಏನಾದರೂ ಅವರಿಗೆ ಹೇಳಿದರೂ ಅವರು ಮಾಡುತ್ತಿಲ್ಲ. ಈ ರೀತಿಯಾಗಿ ಎರಡು ವರ್ಷಗಳಿಂದಲೂ ಆಗಿರುವಂಥಾದ್ದು, ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುವುದೆನೆಂದರೆ ಇವತ್ತು ಸರ್ಕಾರ ಎಷ್ಟೇ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಕೂಡ ಅವನ್ನು ಕಾರ್ಯರೂಪಕ್ಕೆ ತರಬೇಕಾದರೆ ಅಧಿಕಾರಿಗಳು ಮುಖ್ಯವಾಗಿ ಅವರ ಮೇಲೆ ಒಳ್ಳೆಯ ಹಿಡಿತವನ್ನು ಸಾಧಿಸಿದರೆ ಖಂಡಿತ ಒಳ್ಳೆಯದಾಗುತ್ತದೆ. ಅದನ್ನು ಅವರು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಈಗ ಇರುರಂತಹ ಕಮೀಷನರ್ ಅವರನ್ನು ತಮ್ಮ ಹತ್ತಿರ ಕಳುಹಿಸುತ್ತೇನೆ, ತಾವು ಅವರೊಡನೆ ಕುಳಿತು ಚರ್ಚೆ ಮಾಡಿ, ಈ ಸಮಸ್ಯೆ ಬಗೆಹರಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಪೊಲೀಸ್ ಸಿಬ್ಬಂದಿಗಳ ಕೊರತೆ ಹಾಗೂ ಪೊಲೀಸ್ ಮೊಕದ್ದಮೆಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

10(47) - ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು?

ಅ) ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗಾಗಿ ನಿಗದಪಡಿಸಿರುವ ಜನಸಂಖ್ಯೆಗನುಗುಣವಾಗಿ ಗಮುಗುಣವಾಗಿ ಪೊಲೀಸ್ ಸಿಬ್ಬಂದಿಯು ಇರಬೇಕಾಗಿರುವ ಪ್ರಮಾಣವೆಷ್ಟು?

ಆ) ಈ ಪ್ರಮಾಣವನ್ನು ಯಾವಾಗ ನಿಗದಿಪಡಿಸಲಾಗಿದೆ?

ಇ) ಈ ಪ್ರಮಾಣದಲ್ಲಿ ಪೊಲೀಸ್ ಸಿಬ್ಬಂದಿ ಇದ್ದಾರೆಯೇ; ಇಲ್ಲಿದಿದ್ದಲ್ಲಿ ಯಾವಾಗ ತುಂಬಲಾಗುವುದು;

ಈ) ಕಳೆದ 3 ವರ್ಷಗಳ ಅವಧಿಯಲ್ಲಿ ದೊಡ್ಡಬಳ್ಳಾಪುರ ನಗರ ಮತ್ತು ತಾಲ್ಲೂಕಿನಲ್ಲಿ ಬರುವ ಠಾಣೆಗಳಲ್ಲಿ ದಾಖಲಾಗಿರುವ ಮೊಕದ್ದಮೆಗಳೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) ಯಾವುದೇ ಪ್ರಮಾಣವನ್ನು ನಿಗದಿ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ದಾಖಲಾಗಿರುವ ಮೊಕದ್ದಮೆಗಳ ವಿವರಗಳು:

	ಠಾಣೆಗಳು	ಮೊಕದ್ದಮೆಗಳು		
		2000	2001	2002
1)	ದೊಡ್ಡಬಳ್ಳಾಪುರ ಪಟ್ಟಣ ಪೊಲೀಸ್ ಠಾಣೆ	208	186	88
2)	ದೊಡ್ಡಬಳ್ಳಾಪುರ ಗ್ರಾಮಾಂತರ	446	405	203
3)	ದೊಡ್ಡಬೆಳಮಂಗಲ	133	99	45
4)	ಹೊಸಹಳ್ಳಿ ಠಾಣೆ	35	22	15

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ನಾನು ಪೊಲೀಸ್ ಸಿಬ್ಬಂದಿಯ ನೇಮಕಾತಿಯನ್ನು ಯಾವ ನಿಯಮಾವಳಿಯ ಪ್ರಕಾರ ಮಾಡುತ್ತೀರಿ ಎಂದು ಕೇಳಿರುವುದಕ್ಕೆ ಮಾಹಿತಿ ಇಲ್ಲವೆಂದು ಹೇಳಿದ್ದೀರಿ. ಈಗ ಕರ್ನಾಟಕ ರಾಜ್ಯದಲ್ಲಿರುವಂತಹ ಪೊಲೀಸ್ ಸಿಬ್ಬಂದಿಯನ್ನು ಜನಸಂಖ್ಯೆಯ ಆಧಾರದ ಮೇಲೆ ನೇಮಕ ಮಾಡುತ್ತಾರೆ ಅಥವಾ ಯಾವ ರೀತಿಯಾಗಿ ನೇಮಕ ಮಾಡಿಕೊಳ್ಳುತ್ತಾರೆಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಸಧ್ಯದಲ್ಲಿ ಯಾವ ನಿಯಮಾವಳಿಯೂ ಇಲ್ಲ. ನಾವು ಕೇವಲ ಜನಸಂಖ್ಯೆಯ ಆಧಾರದ ಮೇಲೆ ಮತ್ತು ಪ್ರತಿಯೊಂದು ಪೊಲೀಸ್ ಸ್ಟೇಷನ್‌ನಲ್ಲೂ ಐಪಿಸಿ ಆಕ್ಟ್ ಪ್ರಕಾರ ಎಷ್ಟು ಕ್ರೈಮಗಳಾಗುತ್ತವೆ ಎಂಬುದನ್ನು ನೋಡಿಕೊಂಡು ಇವೆಲ್ಲವನ್ನು ನೋಡಿಕೊಂಡು ಮಾಡುವಂತಹ ಒಂದು ಪದ್ಧತಿ ಇದೆ. ಆದರೆ ಇತ್ತೀಚೆಗೆ ಧರ್ಮವೀರರವರ ರಿಪೋರ್ಟ್ ಪ್ರಕಾರ ಅವರು ಹೊಸ ಗೈಡ್‌ಲೈನ್ಸ್ ಕೊಟ್ಟಿದ್ದಾರೆ ಅದರಲ್ಲಿ 50 ರಿಂದ 60 ಸಾವಿರ ಜನಸಂಖ್ಯೆ ಇರಬೇಕು, ರೂರಲ್ ಏರಿಯಾದಲ್ಲಿ 150 ಕಿ.ಮೀ ಚದರ ಅಡಿಯಲ್ಲಿ ಒಂದು ಪೊಲೀಸ್ ಸ್ಟೇಷನ್ ಸ್ಥಾಪನೆಯಾಗುವಂಥಾದ್ದು ಆಗಬೇಕು, ಮತ್ತೆ ಕನಿಷ್ಟ ಪಕ್ಷ 700 ಕ್ರಿಮಿನಲ್ ಕೇಸ್ ಆದರೂ ಆ ಠಾಣೆಯಲ್ಲಿ ದಾಖಲಾಗುವಂತೆ ಇರಬೇಕು. 700ಕ್ಕಿಂತ ಹೆಚ್ಚು ಕೇಸಸ್ ಆದರೆ ಅದನ್ನು ಬೈಪರ್‌ಕೇಟ್ ಮಾಡುವುದಕ್ಕೆ ಅವಕಾಶವಿದೆ. ಆದರೆ ಮಾನ್ಯ ಎ. ಕೃಷ್ಣಪ್ಪನವರ ಮತ ಕ್ಷೇತ್ರದಲ್ಲಿ ಈಗಾಗಲೇ ನಾಲ್ಕು ಪೊಲೀಸ್ ಸ್ಟೇಷನ್‌ಗಳು ಪೈಕಿ ಒಂದು ಇವೆ ಅವುಗಳ ದೊಡ್ಡಬಳ್ಳಾಪುರ ಟೌನ್ ಪೊಲೀಸ್ ಸ್ಟೇಷನ್‌ನಲ್ಲಿ ಈ ವರ್ಷ ಕೇವಲ 88 ಕೇಸ್‌ಸ್ ಆಗಿದ್ದು, ಹೋದ ವರ್ಷ 18 ಕೇಸಸ್ ಆಗಿವೆ ಆಮೇಲೆ ದೊಡ್ಡಬಳ್ಳಾಪುರ ರೂರಲ್ ಪೊಲೀಸ್ ಠಾಣೆಯಲ್ಲಿ 2000 ದಲ್ಲಿ 446 ಕೇಸ್‌ಗಳು, 2001 ರಲ್ಲಿ 405 ಕೇಸ್‌ಗಳು 2002ರಲ್ಲಿ 203 ಕೇಸ್‌ಗಳಾಗಿವೆ ಅದೇ ರೀತಿಯಾಗಿ ದೊಡ್ಡಬೆಳವಂಗಲದಲ್ಲಿ 2000ರಲ್ಲಿ 133 ಕೇಸ್‌ಗಳು 2001 ರಲ್ಲಿ 99 ಕೇಸುಗಳು 99ಕೇಸ್‌ಗಳು 2002ರಲ್ಲಿ 45 ಕೇಸ್‌ಗಳು ದಾಖಲಾಗಿವೆ. ಹೊಸಹಳ್ಳಿ ಠಾಣೆಯಲ್ಲಿ 2000ದಲ್ಲಿ 35 ಕೇಸ್‌ಗಳು, 2001 ರಲ್ಲಿ 22 ಕೇಸ್‌ಗಳು, 2002ರಲ್ಲಿ 15 ಕೇಸ್‌ಗಳು, ದಾಖಲಾಗಿವೆ. ಈಗ ಇರುವಂತಹ ಪೊಲೀಸ್ ಸ್ಟೇಷನ್‌ನಲ್ಲಿ ಹೆಚ್ಚಿನ ಕೆಲಸವಿಲ್ಲ ಮತ್ತೆ ಧರ್ಮವೀರ

ರಿಪೋರ್ಟ್ ಪ್ರಕಾರ ನೋಡಿದರೆ 700ಕ್ಕಿಂತ ಹೆಚ್ಚು ಕೇಸ್‌ಗಳು ಇದ್ದರೆ ಮಾತ್ರ ಟೈಫರ್‌ಕೇಟ್ ಮಾಡಬೇಕೆಂದು ಇದೆ. ಆದರೆ ಈಗ ಇರುವಂತಹ ನಾಲ್ಕು ಪೊಲೀಸ್ ಸ್ಟೇಷನ್‌ಗಳ ಲೆಕ್ಕವನ್ನು ತೆಗೆದುಕೊಂಡಾಗ ಹೆಚ್ಚಿನ ಕೆಲಸದ ಭಾರವಿಲ್ಲ. ಮತ್ತು ಅಲ್ಲಿ ಪೊಲೀಸ್ ಠಾಣೆಯ ಅವಶ್ಯಕತೆ ಇಲ್ಲ ಎಂದು ನಮ್ಮ ಪೊಲೀಸ್ ಇಲಾಖೆಯ ಅಂಕಿಸಂಖ್ಯೆ ಪ್ರಕಾರ ಇವತ್ತು ನಾವು ಹೇಳಬಹುದು. ಆದರೆ ಅವರಿಗೆ ಬೇಕಾದುದು ರಾಜಾನ್ ಕುಂಟೆ ಪೊಲೀಸ್ ಸ್ಟೇಷನ್ ಅನ್ನು ಆಫ್‌ಗ್ರೇಡ್ ಮಾಡಬೇಕೆನ್ನುವ ದೃಷ್ಟಿಯಿಂದ ಅವರು ಪ್ರಶ್ನೆ ಕೇಳಿರಬಹುದು. ಆದರೂ ಕೂಡ ಆ ರಾಜಾನ್‌ಕುಂಟೆ ಪೊಲೀಸ್ ಠಾಣೆಯನ್ನು ಆಪ್‌ಗ್ರೇಡ್ ಮಾಡುವುದರ ಬಗ್ಗೆ ನಾವು ಈಗಾಗಲೇ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದೇವೆ. ಅಲ್ಲಿ ಔಟ್‌ಪೋಸ್ಟ್ ಇದೆ, ಅದನ್ನು ಆಫ್‌ಗ್ರೇಡ್ ಮಾಡಬೇಕೆಂದು ಈಗಾಗಲೇ ನಾವು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಪ್ರೊಪೋಸಲ್ ಕಳುಹಿಸಿದ್ದೇವೆ. ಅಲ್ಲಿ 5ನೇ ಪೊಲೀಸ್ ಸ್ಟೇಷನ್ ಆದರೂ ಕೂಡ ಕೆಲಸ ಬಹಳಷ್ಟು ಇಂಬ್ಯಾಲೆನ್ಸ್ ಆಗುತ್ತದೆ, ಮತ್ತು ಅಲ್ಲಿ ಅಷ್ಟೊಂದು ಅವಶ್ಯಕತೆ ಇಲ್ಲವೆಂದು ಪೊಲೀಸ್ ಇಲಾಖೆಯ ಅಂಕಿಸಂಖ್ಯೆ ಪ್ರಕಾರ ನಾನು ಹೇಳುತ್ತೇನೆ.

ಶ್ರೀ ವಿ. ಕೃಷ್ಣಪ್ಪ: ದೊಡ್ಡಬಳ್ಳಾಪುರ ನಗರದಲ್ಲಿ 74,000 ಪ್ರಜಾಸಂಖ್ಯೆ ಇದೆ. ಅದರಲ್ಲಿ ಅರ್ಧ ಭಾಗದಷ್ಟು ಮಹಿಳೆಯರಿದ್ದಾರೆ, ಅಲ್ಲಿ ಒಬ್ಬರು ಲೇಡಿ ಕಾನ್‌ಸ್ಟೇಬಲ್ ಇಲ್ಲ, ಮೂರು ಜನಕ್ಕೆ ಪ್ರಾವಿಷನ್ ಅದೆ, ಆದರೂ ಕೂಡ ಒಬ್ಬರನ್ನು ಅಲ್ಲಿ ನೇಮಕ ಮಾಡಿಲ್ಲ, ದಯವಿಟ್ಟು, ಗೃಹ ಮಂತ್ರಿಗಳು ಆ ನಗರಕ್ಕೆ ಲೇಡಿ ಕಾನ್‌ಸ್ಟೇಬಲ್‌ಗಳನ್ನು ಇರತಕ್ಕಂತಹ ಪ್ರಾವಿಷನ್‌ನಲ್ಲಿ ಹಾಕಿಕೊಡಬೇಕೆಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದನ್ನು ಪರಿಶೀಲಿಸಲಾಗುವುದು.

ಪ್ರಶ್ನೆ ಸಂಖ್ಯೆ 55

ಶ್ರೀ ಎಸ್. ಕುಮಾರ ಬಂಗಾರಪ್ಪ (ಪೌರತಳಿತ ಸಚಿವರು): ಇದು ಕುಡಿಯುವ ನೀರಿಗೆ ಸಂಬಂಧಿಸಿದ್ದು, ಈ ಪ್ರಶ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಅಲ್ಲ. ನಗರಾಭಿವೃದ್ಧಿ ಸಚಿವರಿಗೆ ವರ್ಗಾವಣೆಯಾಗಿದೆ. ಮಾನ್ಯಸದಸ್ಯರು ಮಂತ್ರಿಗಳ ಸಂಖ್ಯೆ ಜಾಸ್ತಿಯಾಗಿದೆ ಯಾರಿಗೆ ಎಂಬುದು ಗೊತ್ತಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ: ಶರೀರದ ಎಷ್ಟು ಭಾಗಗಳಿವೆ ಅಷ್ಟು ಭಾಗಗಳನ್ನಾಗಿ ಒಂದೊಂದು ಇಲಾಖೆಯನ್ನು ಮಾಡಿದರೆ ಇದೇ ತಾಪತ್ರೆಯವಾಗುತ್ತದೆ..... (ಗೊಂದಲ)

ಅಧ್ಯಕ್ಷರು: ನೋ ಕಾಮೆಂಟ್ಸ್, ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಸದಸ್ಯರು ಇತ್ತೀಚೆಗೆ ಹೊಸ ವಿಶ್ಲೇಷಣೆಯನ್ನು ಕೊಡುತ್ತಿದ್ದಾರೆ, ಹಿಂದಿನಿಂದಲೂ ಮುನಿಸಿಪಾಲಿಟಿಸನ್ ಇಬ್ಬರು ಮಂತ್ರಿಗಳಿದ್ದಾರೆ. ಆದುದರಿಂದ ಇದರಲ್ಲಿ ಹೊಸ ವಿಚಾರವೇನೂ ಇಲ್ಲ.

ಶ್ರೀ ಆರಗ ಜ್ಞಾನೇಂದ್ರ: ಮಂತ್ರಿಗಳಿಗೆ ಗೊಂದಲವಾದರೆ ಜನರು ಹೇಗೆ ಅರ್ಥ ಮಾಡಿಕೊಳ್ಳುವುದು